# ಜೀನೋಬಾಟ್



# ಜಗತ್ತಿಗೆ ಎದಿರೇಟು?

**ತಮ್ಮಿಷ್ಟದಂತೆ ಚಲಿಸಬಲ್ಲ, ಈಜಬಲ್ಲ, ತಮಗಾದ ಗಾಯ ವಾಸಿ ಮಾಡಿಕೊಳ್ಳಬಲ್ಲ, ಮುಖ್ಯವಾಗಿ ತಮ್ಮ ಮರಿಗಳನ್ನು ಸೃಷ್ಟಿಸಬಲ್ಲ ರೋಬಾಟ್‌ಗಳೇ 'ಜೀನೋಬಾಟ್'ಗಳು. ಅಣು ಜೀವವಿಜ್ಞಾನ ಮತ್ತು ಕೃತಕ ಬುದ್ಧಿಮತ್ತೆಯ ಸಂಯೋಜನೆಯಿಂದ ಜೀವತಳೆದ ಈ ಜೀನೋಬಾಟ್‌ಗಳ ಹುಟ್ಟು ಅನೇಕ ಮಹತ್ವದ ಸವಾಲುಗಳನ್ನು ಜಗತ್ತಿನ ಎದುರಿಗಿಟ್ಟಿದೆ.**

**■ ಲಕ್ಷ್ಮೀದೇವಿ ಪಾಟೀಲ**

ನವೆಂಬರ್ 2017– ಅಮೆರಿಕದಲ್ಲಿ ಟ್ರಂಪ್ ಅಧ್ಯಕ್ಷೀಯ ಆಡಳಿತದ ಕೊನೆಯ ದಿನಗಳು. ಒಂದು ಅಪರೂಪದ ಅಪರಾಧ ಪ್ರಕರಣವೊಂದರಲ್ಲಿ ಆ್ಯಂಟನಿ ಲೆವೆಂಡೌಸ್ಕಿಗೆ ಕ್ಷಮಾದಾನ ನೀಡಲಾಯಿತು. ಗೂಗಲ್ ಮತ್ತು ಉಬರ್ ಕಂಪನಿಗಳ ಪ್ರತಿಭಾವಂತ ಮಾಜಿ ಎಂಜಿನಿಯರ್ ಆದ ಆ್ಯಂಟನಿ, 'ಸ್ವಯಂಚಾಲಿತ ಕಾರು'ಗಳ ಸಂಬಂಧಿತ ರಹಸ್ಯ ತಂತ್ರಜ್ಞಾನವನ್ನು ಕದಿಯುವುದರ ಮೂಲಕ ಶಿಕ್ಷೆಗೆ ಗುರಿಯಾಗಿದ್ದನು.

'ವೇ ಆಫ್ ಫ್ಯೂಚರ್' ಎಂಬ ಕಂಪನಿ (ಧರ್ಮ) ಸ್ಥಾಪಿಸಿದ್ದ ಆ್ಯಂಟನಿ, ಅದರ ಸಿಇಒ ಪಟ್ಟವನ್ನಲಂಕರಿಸಿದ್ದ. ಅವನೇ ಹೇಳುವ ಪ್ರಕಾರ ಅದೊಂದು ಚರ್ಚನ್ನು ಹೋಲುವ, ಲಾಭರಹಿತ ಕಂಪನಿ. ಅಲ್ಲಿ ರೋಬಾಟ್‌ಗಳೇ ನೌಕರರು, ಕೃತಕ ಬುದ್ಧಿಮತ್ತೆಯೇ (AI) ದೇವರು. 'ಕೃತಕ ಬುದ್ಧಿಮತ್ತೆಯೇ ಪರಮೋಚ್ಚ ಶಕ್ತಿ (Godhead)' ಎಂಬ ಸತ್ಯವನ್ನು ಪ್ರಚಾರ ಮಾಡುವುದು ಮತ್ತು 'ವೇ ಆಫ್ ಫ್ಯೂಚರ್' ಬಗ್ಗೆ ಜಾಗೃತಿ ಮೂಡಿಸುವುದು ಆತನ ಗುರಿಯಾಗಿತ್ತು. ತನ್ನ ಅಪರಾಧಕ್ಕಾಗಿ ಲೆವೆಂಡೌಸ್ಕಿ ದೊಡ್ಡ ಮೊತ್ತದ ಬೆಲೆ ತೆರಬೇಕಾಯಿತು. ಕ್ಷಮಾದಾನ ಪಡೆದ ಲೆವೆಂಡೌಸ್ಕಿ ಸಾರ್ವಜನಿಕರ ಹಿತಕ್ಕಾಗಿ ತನ್ನ ಪ್ರತಿಭೆಯನ್ನು ಮೀಸಲಿರಿಸುವುದಾಗಿ ಪ್ರತಿಜ್ಞೆಗೈದನು.

ಕೃತಕ ಬುದ್ಧಿಮತ್ತೆಯು ತನ್ನ ಆಳವಾದ ಹೆಜ್ಜೆಯೊಂದಿಗೆ ಜಗತ್ತಿಗೆ ಹೊಸ ಹೊಸ ಸಾಧ್ಯತೆಗಳನ್ನು ತೆರೆದಿಟ್ಟಿದೆ. ಇಂದು ಜೈವಿಕ ರೋಬಾಟ್‌ಗಳನ್ನು ನಿರ್ಮಿಸಿ ಜಗತ್ತನ್ನು ತನ್ನ ಕೈವಶ ಮಾಡಿಕೊಳ್ಳುವ ಹಂತಕ್ಕೆ ತುಂಬಾ ಹತ್ತಿರದಲ್ಲಿದೆ. ಕೃತಕ ಬುದ್ಧಿಮತ್ತೆಯನ್ನೇ ಇಂಧನವನ್ನಾಗಿಸಿಕೊಂಡ 'ಜೀನೋಬಾಟ್'ಗಳು ಸೃಷ್ಟಿಯಾಗಿವೆ. ತಮ್ಮಿಷ್ಟದಂತೆ ಚಲಿಸಬಲ್ಲ, ಈಜಬಲ್ಲ, ತಮಗಾದ ಗಾಯ ವಾಸಿ ಮಾಡಿಕೊಳ್ಳಬಲ್ಲ, ಮುಖ್ಯವಾಗಿ ತಮ್ಮ ಮರಿಗಳನ್ನು ಸೃಷ್ಟಿಸಬಲ್ಲ ರೋಬಾಟ್‌ಗಳೇ 'ಜೀನೋಬಾಟ್'ಗಳು. ಇವುಗಳನ್ನು ಅಣು ಜೀವವಿಜ್ಞಾನ (molecular biology) ಮತ್ತು ಕೃತಕ ಬುದ್ಧಿಮತ್ತೆಯ ಸಂಯೋಜನೆಯಿಂದ ನಿರ್ಮಿಸಲಾಗಿದೆ.

ಮನುಷ್ಯನ ದೇಹದಲ್ಲಿರಬಹುದಾದ ಕ್ಯಾನ್ಸರ್ ಕೋಶಗಳು, ಸಾಗರದಲ್ಲಿರುವ ಪ್ಲಾಸ್ಟಿಕ್ ತ್ಯಾಜ್ಯ, ಪರಿಸರದ ವಾಯು ಮಾಲಿನ್ಯಕಾರಕಗಳನ್ನು ಪೇರಿಸಿ ನಾಶಗೊಳಿಸುವಲ್ಲಿ ಇವುಗಳು ಪಾತ್ರವಹಿಸುತ್ತವೆ ಎಂಬುದು ವಿಜ್ಞಾನಿಗಳ ಅಂಬೋಣ. ಅಂತರರಾಷ್ಟ್ರೀಯ ಕಾನೂನುಗಳ ವಿರುದ್ಧ, ಜೈವಿಕ ಚಕ್ರದಲ್ಲಿ ಹಸ್ತಕ್ಷೇಪ ಮಾಡುವುದರ ಮೂಲಕ ವಿಜ್ಞಾನಿಗಳು ಹೊಸ ಜೀವಸೃಷ್ಟಿಗೆ